**<u>ದಿನಾಂಕಃ 20.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಕೆ.ಟಿ.ಟಿ. ವಕೀಲರಿಂದಃ</u>**

1) ವಾದಿ ಲಿಂಗಪ್ಪನ ತಂದೆಯನ್ನು ನಾನು ನೋಡಿರುವುದಿಲ್ಲ. ಸದರಿ ಲಿಂಗಪ್ಪನ ತಂದೆಗೆ ಎಷ್ಟು ಜನ ಸಹೋದರರು ಮತ್ತು ಸಹೋದರಿಯರು ಇದ್ದರು ಎಂದು ನನಗೆ ಗೊತ್ತಿಲ್ಲ. ನನಗೆ ಲೋಕ ಜ್ಞಾನ ಬರುವುದಕ್ಕೂ ಪೂರ್ವದಲ್ಲಿಯೇ ವಾದಿ ಲಿಂಗಪ್ಪನ ತಂದೆ ಮೃತಪಟ್ಟಿದ್ದರು. ವಾದಿ ಲಿಂಗಪ್ಪನ ತಂದೆ ಮತ್ತು ಲಿಂಗಪ್ಪನ ಸಹೋದರರು ಅವರ ಜೀವಿತ ಕಾಲದಲ್ಲಿ ಏನು ಏನು ವ್ಯವಹಾರ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಯಾವ ಸರ್ವೆ ನಂಬರ್ ನ ಜಾಗಕ್ಕೆ ಈ ಪ್ರಕರಣ ದಾಖಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚಕ್ಕುಬಂದಿ ನನಗೆ ಗೊತ್ತಿಲ್ಲ.

2) ಸರ್ವೆ ನಂ.213/1 ರಲ್ಲಿ ಲಿಂಗಪ್ಪ ಮತ್ತು ಅವರ ಸಹೋದರ ಅಂದಾನಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಸದರಿ ಜಮೀನನ್ನು ಹೊರತುಪಡಿಸಿ ಲಿಂಗಪ್ಪ ಮತ್ತು ಅವರ ಸಹೋದರ ಅಂದಾನಿಯವರಿಗೆ ಅಲ್ಲಿ ಬೇರೆ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಲಿಂಗಪ್ಪ ಮತ್ತು ಅವರ ಸಹೋದರ ಅಂದಾನಿರವರಿಗೆ ಇರುವ ಜಮೀನಿನ ಕುರಿತು ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 4ನೇ ಖಂಡಿಕೆಯಲ್ಲಿ ತಿಳಿಸಿದಂತೆ ಪಂಚಾಯಿತಿ ಆಗಿದೆಯೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಕುರಿತು ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ 1ನೇ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3) ಪ್ರತಿವಾದಿಗಳನ್ನು ನಾನು ನೋಡಿರುತ್ತೇನೆ. ಅವರೂ ಸಹ ಒಂದು ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಅವರು ತಮ್ಮ ಸ್ವತ್ತಿನಲ್ಲಿ ತೆಂಗಿನ ಗಿಡಗಳನ್ನು ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳ ಜಾಗದಲ್ಲಿ ತೆಂಗಿನ ಮರ ಇರುತ್ತವೆ ಎಂಬುದಾಗಿ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ಜಮೀನಿನ ವಿಸ್ತೀರ್ಣ, ಚಕ್ಕುಬಂದಿ ಮತ್ತು ಸರ್ವೆ ನಂಬರ್ ಬರೆಸಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ಊರಿನಲ್ಲಿ ಪಂಚಾಯಿತಿ ಆಗಿದೆ

ಎಂಬುದಾಗಿ ಬರೆಸಿರುವುದಿಲ್ಲ ಮತ್ತು ಆ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ತಂದೆಯ ಹೆಸರು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ನಮ್ಮ ಊರಿನವರು ಆಗಿರುತ್ತಾರೆ.

4) ಪ್ರತಿವಾದಿಗಳ ತಂದೆ 1943 ಮತ್ತು 1948 ರಲ್ಲಿ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಈ ಹಿಂದೆ ಪ್ರತಿವಾದಿಗಳ ತಂದೆ ದೇವೇಗೌಡರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ನಾನು ಆ ಬಗ್ಗೆ ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ಪ್ರತಿವಾದಿಗಳು ಜಮೀನನ್ನು ಒಟ್ಟಿಗೆ ವ್ಯವಸಾಯ ಮಾಡುತ್ತಾರೆಯೇ ಅಥವಾ ಬೇರೆ ಬೇರೆಯಾಗಿ ವ್ಯವಸಾಯ ಮಾಡುತ್ತಾರೆಯೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿಗೆ 1ನೇ ಪ್ರತಿವಾದಿಯು ತನ್ನ ಭಾಗದ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಪ್ರಸ್ತುತ ಮಾರಲಿಂಗೇಗೌಡ ಎಂಬುವವರ ಹೆಸರಿನಲ್ಲಿ ಇರುತ್ತದೆ. ದಾವಾ ಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಮತ್ತು ಅದರ ಅಕ್ಕಪಕ್ಕದಲ್ಲಿ ನನಗೆ ಸೇರಿದ ಯಾವುದೇ ಜಮೀನು ಇಲ್ಲ ಮತ್ತು ನಾನು ಅಲ್ಲಿ ಯಾವುದೇ ರೀತಿ ಉಳುಮೆ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಅನುಕೂವಲವಾಗಲೀ ಎಂಬ ಕಾರಣಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**